ಗೆಳೆಯರ ಸಂಪರ್ಕ, ಅನೇಕ ಸಮಾಜವಾದಿ ಅಧ್ಯಯನ ಶಿಬಿರಗಳಲ್ಲಿನ ಭಾಗವಹಿಸುವಿಕೆಯಿಂದಾಗಿ ನಾಭೂ ಓರ್ವ ಪಕ್ಕಾ ಲೋಹಿಯಾಪ್ರಣೀತ ಸಮಾಜವಾದದ ತತ್ವ ಪ್ರತಿಪಾದಕರಾದರು. ಜಯಪ್ರಕಾಶ ನಾರಾಯಣರ ಸೆರೆಮನೆಯ ದಿನಚರಿಯನ್ನು ಕನ್ನಡಕ್ಕೆ ಅನುವಾದಿಸಿ ನೆಲಮನೆ ದೇವೇಗೌಡರ ಪ್ರಕಾಶನ ಸಂಸ್ಥೆಯಿಂದ ಪ್ರಕಟಿಸಿದರು. ಲೋಹಿಯಾರ 'ಮ್ಯಾನ್ ಕೈಂಡ್' ಪತ್ರಿಕೆಯ ಮಾದರಿಯಲ್ಲಿ ಮೈಸೂರಿನಿಂದ 'ಮಾನವ' ಪತ್ರಿಕೆಯನ್ನು ಸಂಪಾದಿಸತೊಡಗಿದರು. ದೆಹಲಿಯಲ್ಲಿದ್ದಾಗಲೇ ಕರ್ನಾಟಕದಲ್ಲಿ ಸಮಾಜವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಬೆಳೆಸಲು ಉದ್ಯುಕ್ತರಾದರು. ಒಂದು ರೀತಿಯಲ್ಲಿ ಕರ್ನಾಟಕ ಸಮಾಜವಾದಿ ಮತ್ತು ಉತ್ತರದ ಸಮಾಜವಾದಿಗಳ ಕೊಂಡಿಯಾಗಿದ್ದರು. ನಾಲ್ಕೈದು ವರ್ಷಗಳ ನಂತರ ಕರ್ನಾಟಕಕ್ಕೇ ಬಂದು ನೆಲಸಿದ ನಾಭೂ ತಮ್ಮ ಆತ್ಮಸಂಗಾತರೆನಿಸಿಕೊಂಡಿದ್ದ ಲೋಹಿಯಾರ ಮೂಲಕ ಅಂಬೇಡ್ಕರ್ ಮತ್ತು ಗಾಂಧೀಜಿಯವರಡೆಗೆ ತಮ್ಮ ಬೌದ್ಧಿಕ ಪಯಣವನ್ನು ಬೆಳೆಸಿದರು. ತರುಣ ಪೀಳಿಗೆಗಾಗಿ ಸಮಾಜವಾದಿ ಅಧ್ಯಯನ ಶಿಬಿರಗಳನ್ನು ತಮ್ಮ ದೈಹಿಕ ಅಡಚಣೆಗಳನ್ನೂ ಲೆಕ್ಕಿಸದೆ ಆಯೋಜಿಸಿ, ತಾವು ನಂಬಿದ ಮತ್ತು ಪ್ರೀತಿಸಿದ ತಾತ್ವಿಕತೆಯನ್ನು ವಿಸ್ತರಿಸಲು ಸತತವಾಗಿ ಶ್ರಮಿಸಿದರು. ಆ ಕಾರ್ಯದಲ್ಲಿ ಅವರಿಗೆ ಹೆಗಲೆಣೆಯಾಗಿ ನಿಂತವರು ಅವರ ಪತ್ನಿ, ಕನ್ನಡದ ಅತ್ಯಂತ ಪ್ರಮುಖ ಕವಯಿತ್ರಿ ಸವಿತಾ ನಾಗಭೂಷಣ್.

ನಾಭೂ ತಮ್ಮ ಎಲ್ಲ ಬರಹ, ಕೃತಿಗಳಲ್ಲಿ ಸಾಹಿತ್ಯ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮತ್ತಿತರ ಸಮಕಾಲೀನ ವಿದ್ಯಮಾನಗಳಿಗೆ ಅತ್ಯಂತ ವಸ್ತುನಿಷ್ಠವಾಗಿ, ನಿರ್ಭಿಡೆ, ನಿಷ್ಠುರತೆಯಿಂದ ಬರೆದು, ಪ್ರತಿಕ್ರಿಯಿಸಿ ಆ ಗುಣವನ್ನು ತಮ್ಮ ಕೊನೆಯ ಗಳಿಗೆಯವರೆಗೂ ಕಾಪಾಡಿಕೊಂಡಿದ್ದರು. ಯಾರ, ಯಾವ ಮುಲಾಜು ಗಿಲಾಜು ನೋಡದೆ ತಮ್ಮ ನಿಖರ ಮತ್ತು ನೇರ ನುಡಿಗಳ ಕಾರಣದಿಂದಾಗಿ ಅವರ ಮೊನಚು ಮತ್ತು ವ್ಯಂಗ್ಯಕ್ಕೆ ವಿಶಿಷ್ಟ ಧ್ವನಿ ಪ್ರಾಪ್ತವಾಗುತ್ತಿತ್ತು. ತಮ್ಮ ಕೊನೆಯ ದಿನಗಳಲ್ಲಿ ತಪಸ್ಸಿನಂತೆ ಕುಳಿತು 'ಗಾಂಧಿ ಕಥನ'ವನ್ನು ಸಮಗ್ರವಾಗಿ ಕಟ್ಟಿಕೊಟ್ಟರು. ದೇವನೂರ ಮಹಾದೇವರ ಮಾತಿನಲ್ಲಿ ಹೇಳಬೇಕೆಂದರೆ, 'ತನ್ನ ತನು–ಮನ–ಧನ–ಆತ್ಮಗಳನ್ನು ಸುರಿದು ಡಿಎಸ್ಎನ್ ಈ ಕಥನವನ್ನು ಕಟ್ಟಿದ್ದಾರೆ.' ಕನ್ನಡ ಓದುಗರು ಅದರ ಅಸಂಖ್ಯಾತ ಆವೃತ್ತಿಗಳು ಮತ್ತೆ ಮತ್ತೆ ಪ್ರಕಟವಾಗುವಂತೆ ಮಾಡಿ ನಾಭೂ ಅವರಿಗೆ ಒಂದು ಪವಾಡದ ಕಿರೀಟವನ್ನೇ ತೊಡಿಸಿದ್ದಾರೆ.

ಸಮಸಮಾಜದ ಆಶಯ, ಪ್ರಜಾಸತ್ತಾತ್ಮಕ ಮೌಲ್ಯ, ಜಾತ್ಯತೀತತೆ – ಇಂಥ ಮನೋಭೂಮಿಕೆಯಿದ್ದವರು ಮತ್ತು ಅವುಗಳಿಗನುಗುಣವಾಗಿ ಬಾಳಿದಂಥವರು ಕೆಲವೇ ಮಂದಿ. ಅಂಥವರಲ್ಲಿ ಒಬ್ಬರಾಗಿದ್ದ, ಮೈಸೂರಿನಲ್ಲಿದ್ದ ಪ್ರೊ. ಕೆ. ರಾಮದಾಸ್, ನಾಭೂ ಅವರಿಗೆ ಹತ್ತಿರದವರಾಗಿದ್ದರು. ರಾಮದಾಸ್ ಕುರಿತ ಲೇಖನಗಳ ಸಂಗ್ರಹದ ಸಂಪಾದಕರಲ್ಲಿ ಒಬ್ಬರು ನಾಭೂ. ಅದರಲ್ಲಿ ರಾಮದಾಸ್ ಅವರನ್ನು ಕುರಿತಂತೆ ಹೀಗೆ ಬರೆದಿದ್ದಾರೆ: 'ಎಲ್ಲ ಸಾಮಾನ್ಯ ಮನುಷ್ಯರಂತೆ ಅವರು ಅಹಂಕಾರಿಯಾಗಿಯೂ, ಕೆಟ್ಟ ಹಟವಾದಿಯಾಗಿಯೂ, ಅತಿ ವೈಯಕ್ತಿಕವಾದಿಯಾಗಿಯೂ, ಕುರುಡು ವ್ಯಕ್ತಿ ನಿಷ್ಠೆಯಿಂದಲೂ ವರ್ತಿಸಿದ ಹಲವು ಸಂದರ್ಭಗಳುಂಟು.' ಬಹುತೇಕ ಈ ಎಲ್ಲ ಮಾತುಗಳನ್ನೂ ನಾವು ನಾಭೂ ಅವರಿಗೆ ಆರೋಪಿಸಲು ಶಕ್ಯವಿದೆ. ಅವರು ಎಷ್ಟು ಅಸಾಮಾನ್ಯ ವ್ಯಕ್ತಿಯಾಗಿದ್ದರೋ ಅಷ್ಟೇ ಸಾಮಾನ್ಯರಾಗಿದ್ದರು. ಎಷ್ಟು ಸಾಮಾನ್ಯರೆಂದರೆ ದೋಸೆಗೆ ಆಲೂಗೆಡ್ಡೆ ಪಲ್ಯ ಮಾಡಿಲ್ಲವೆಂದು ಪತ್ನಿಯ ಮೇಲೆ 'ಭಯಂಕರ'ವಾಗಿ ರೇಗಾಡುವಷ್ಟು ಸಾಮಾನ್ಯ! ಬೇರೆಯವರ ಮೈಮೇಲೆ ಒಡವೆಗಳನ್ನು ಕಂಡರೆ ನಗುತ್ತಾ ಚುಚ್ಚುನುಡಿಯಾಡುವಾಗ ತಮ್ಮ ಕೊರಳಚೈನನ್ನು ಮರೆತುಬಿಡುವಷ್ಟು ಸಾಮಾನ್ಯ!